

# ಗ್ಲಾಕೋಮ–ಮಯೋಪಿಯ

## ಸೋದರ ಕಾಯಿಲೆಗಳಿಂದ ಕಣ್ಣು ಹೈರಾಣು

**ದೃಷ್ಟಿದೋಷಕ್ಕೆ ಸಂಬಂಧಿಸಿದ ಗ್ಲಾಕೋಮ ಹಾಗೂ ಮಯೋಪಿಯ ಎರಡೂ ಸಹೋದರ ಕಾಯಿಲೆಗಳಿದ್ದಂತೆ. ಮಯೋಪಿಯ ಇರುವವರಿಗೆ ಗ್ಲಾಕೋಮ ಕಾಣಿಸಿಕೊಳ್ಳುವ ಸಾಧ್ಯತೆ ಮೂರು ಪಟ್ಟು ಹೆಚ್ಚು ಎಂಬುದನ್ನು ಇತ್ತೀಚಿನ ವೈದ್ಯಕೀಯ ಅಧ್ಯಯನ ಸಾಬೀತುಪಡಿಸಿದೆ.**

■ **ಉಮಾ ಅನಂತ್**

ಬೆಂಗಳೂರಿನ ರಾಜಶೇಖರ್‌ಗೆ ವಯಸ್ಸು 67. 2020ರಲ್ಲಿ ಕಣ್ಣುಗಳ ಪರೀಕ್ಷೆ ಮಾಡಿಸಿದಾಗ ಏನೂ ತೊಂದರೆ ಇಲ್ಲ ಎಂಬ ವೈದ್ಯಕೀಯ ವರದಿ ಬಂದಿತ್ತು. ಕಣ್ಣು ಮಂಜಾಗುತ್ತದೆ ಎಂಬ ಅರಿವು ಬಂದೊಡನೆ ಕಳೆದ ವರ್ಷ ಏಪ್ರಿಲ್‌ನಲ್ಲಿ ಮತ್ತೆ ಕಣ್ಣಿನ ತಪಾಸಣೆ ಮಾಡಿಸಿಕೊಂಡಾಗ ಇವರಿಗೆ ದೃಷ್ಟಿಮಂದ ಸಮಸ್ಯೆ ಇರುವುದು ಪತ್ತೆಯಾಯಿತು. ಇದಕ್ಕೂ ಚಿಕಿತ್ಸೆ ಪಡೆಯಲಾಯಿತು. ಆದರೆ ಸಮಸ್ಯೆ ಹೆಚ್ಚುತ್ತಲೇ ಹೋಯಿತು. ಕಳೆದ ತಿಂಗಳು ಮತ್ತೆ ತಪಾಸಣೆ ಮಾಡಿದಾಗ ಇವರಿಗೆ ಗ್ಲಾಕೋಮ ಇರುವುದು ಖಚಿತವಾಯಿತು. ಅಲ್ಲದೆ ಗ್ಲಾಕೋಮದ ಜೊತೆಗೆ ಮಯೋಪಿಯವೂ ತೊಂದರೆ ಕೊಡುತ್ತಿರುವುದು ಇವರ ದೃಷ್ಟಿ ಸಮಸ್ಯೆಗೆ ಕಾರಣ ಎಂಬುದನ್ನು ವೈದ್ಯರು ಸಾಬೀತುಪಡಿಸಿದರು.

ಈಗೀಗ ಗ್ಲಾಕೋಮ ಹಾಗೂ ಮಯೋಪಿಯ ಎಂಬ ಎರಡು ರೀತಿಯ ನೇತ್ರಸಮಸ್ಯೆಗಳು ಒಟ್ಟೊಟ್ಟಿಗೆ ಬರಲಾರಂಭಿಸಿವೆ. ಎರಡೂ ಕಾಯಿಲೆಗಳಿಗೂ ಹತ್ತಿರದ ನಂಟು ಇದ್ದು, ದೃಷ್ಟಿಯನ್ನು ಸಂಪೂರ್ಣ ಕುರುಡು ಮಾಡಲು ಕಾರಣವಾಗುತ್ತವೆ. ಅಲ್ಲದೆ ಬರೀ ಮಯೋಪಿಯ ಇರುವವರಲ್ಲಿ ಗ್ಲಾಕೋಮ ಕಾಣಿಸಿಕೊಳ್ಳುವ ಸಾಧ್ಯತೆ ಮೂರು ಪಟ್ಟು ಹೆಚ್ಚು ಎಂಬುದನ್ನು ವೈದ್ಯಕೀಯ ವರದಿ ಸಾಬೀತುಪಡಿಸಿದೆ.

### ಏನಿದು ಮಯೋಪಿಯ?

ದೂರದ ವಸ್ತುಗಳನ್ನು ನೋಡಲು ಅಸಮರ್ಥವಾಗುವುದು ಮಯೋಪಿಯ ಎನಿಸಿಕೊಳ್ಳುತ್ತದೆ. ಇದು ಕಣ್ಣಿನ ವಕ್ರತೆ ಅಥವಾ ವಕ್ರೀಕಾರಕ (ರಿಫ್ರಾಕ್ಟಿವ್) ದೋಷಕ್ಕೆ ಕಾರಣವಾಗುತ್ತದೆ ಮತ್ತು ಭಾರತದ ಶೇ. 10–20 ಜನಸಂಖ್ಯೆಗೆ ಈ ಸಮಸ್ಯೆ ಬಾಧಿಸುತ್ತದೆ' ಎಂದು ಹೇಳುತ್ತಾರೆ ಬೆಂಗಳೂರಿನ ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ನೇತ್ರತಜ್ಞೆಯಾಗಿರುವ ಡಾ. ಸುನಿತಾ ಪಿ.

ಜೊತೆಗೆ ಆನುವಂಶಿಕ ಸಮಸ್ಯೆ, ಅರಿವಿನ ಕೊರತೆಯೂ ಮಯೋಪಿಯಕ್ಕೆ ಕಾರಣಗಳೇ ಎನ್ನುತ್ತಾರೆ ಅವರು.

'ಮಯೋಪಿಯ ಮತ್ತು ಗ್ಲಾಕೋಮ ಮಧ್ಯೆ ಇರುವ